# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :585 |
| 2. | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | :ಶ್ರೀ ಶಿವಕುಮಾರ್ .ಕೆ (ನಾಮನಿರ್ದೇಶಿತರು) |
| 3. | ಉತ್ತರಿಸಬೇಕಾದ ದಿನಾಂಕ | :09.03.2026 |
| 4. | ಉತ್ತರಿಸುವ ಸಚಿವರು | :ಮಾನ್ಯ ಆಹಾರ ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ, ಇಲಾಖೆ |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಕಾನೂನು ಮತ್ತು ಮಾಪನಶಾಸ್ತ್ರ ಇಲಾಖೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಂಖ್ಯೆ ಎಷ್ಟು: 2025-26 ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಪರಿಶೀಲನೆ ಮಾಡಲಾಗಿದೆ; ಎಷ್ಟು ಪ್ರಕರಣಗಳು ದಾಖಲಾಗಿವೆ ಹಾಗೂ ಎಷ್ಟು ದಂಡ ಮೊತ್ತ ಸಂಗ್ರಹವಾಗಿದೆ. | ಕಾನೂನು ಮಾಪನಶಾಸ್ತ್ರ, ಇಲಾಖೆಯಲ್ಲಿ ಪ್ರಸ್ತುತ 450 ಮಂಜೂರಾತಿ ಹುದ್ದೆಗಳಿದ್ದು, ಅವುಗಳ ಪೈಕಿ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನೊಳಗೊಂಡಂತೆ 189 ನೌಕರರು ಕಾರ್ಯನಿರ್ವಹಿಸುತ್ತಿದ್ದು, 261 ಹುದ್ದೆಗಳು ಖಾಲಿ ಇರುತ್ತವೆ (ವೃಂದವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ).<br><br>ಮುಂದುವರೆದು, ಕಾನೂನು ಮಾಪನಶಾಸ್ತ್ರ, ಇಲಾಖೆಯಲ್ಲಿ 2025-26ನೇ ಸಾಲಿನ ಜನವರಿ-2026 ರ ಮಾಹೆಯ ಅಂತ್ಯದವರೆಗೆ ರಾಜ್ಯಾದ್ಯಂತ ಒಟ್ಟು 71,293 ತಪಾಸಣೆಗಳನ್ನು ಕೈಗೊಂಡು 13,964 ಮೊಕದ್ದಮೆಗಳನ್ನು ಹೂಡಿ, ರೂ. 3,79,26,000/-ಗಳ ಅಭಿಸಂಧಾನ ಶುಲ್ಕವನ್ನು ಸಂಗ್ರಹಿಸಲಾಗಿರುತ್ತದೆ. |
| ಆ) | ಕಾನೂನು ಮತ್ತು ಮಾಪನಶಾಸ್ತ್ರ ಇಲಾಖೆಯಿಂದ ಸರ್ಕಾರಕ್ಕೆ ಬರುತ್ತಿರುವ ವಾರ್ಷಿಕ ಆದಾಯ ಎಷ್ಟು; | ಕಾನೂನು ಮಾಪನಶಾಸ್ತ್ರ, ಇಲಾಖೆಗೆ ಪ್ರತಿ ವರ್ಷ ಆರ್ಥಿಕ ಇಲಾಖೆಯು ರಾಜಸ್ವ ಸಂಗ್ರಹಣೆಯ ಗುರಿಯನ್ನು ನಿಗದಿಪಡಿಸಲಾಗುತ್ತಿದ್ದು, ಕಳೆದ 3 ವರ್ಷಗಳಲ್ಲಿ ಇಲಾಖೆಯು ಸಾಧಿಸಿರುವ ಪ್ರಗತಿಯ ವಿವರಗಳು ಈ ಕೆಳಗಿನಂತಿವೆ. |

| ಆರ್ಥಿಕ ವರ್ಷ | ಸರ್ಕಾರವು ನಿಗದಿಪಡಿಸಿದ ಗುರಿ | ಇಲಾಖೆಯು ಸಾಧಿಸಿರುವ ಪ್ರಗತಿ | ಶೇಕಡಾ |
|---|---|---|---|
| 2022-23 | 55.30 | 63.52 | 114.86% |
| 2023-24 | 56.30 | 83.19 | 147.76% |
| 2024-25 | 66.30 | 82.04 | 123.74% |
| 2025-26 (ಏಪ್ರಿಲ್-2025 ರಿಂದ ಜನವರಿ-2026 ರ ಅಂತ್ಯದವರೆಗೆ | 76.30 | 72.48 | 94.99% |

| | | |
|---|---|---|
| ಇ) | ಕಾನೂನು ಮತ್ತು ಮಾಪನಶಾಸ್ತ್ರ ಇಲಾಖೆಯನ್ನು ಕೇಂದ್ರ ಸರ್ಕಾರವು ಖಾಸಗೀಕರಣ ಮಾಡುತ್ತಿರುವ ಮಾಹಿತಿ ರಾಜ್ಯ ಸರ್ಕಾರದ | ಪ್ರಸುತ ಕಾನೂನು ಮಾಪನಶಾಸ್ತ್ರ, ಇಲಾಖೆಯಲ್ಲಿ ತೂಕ ಮತ್ತು ಅಳತೆ ಸಾಧನಗಳಿಗೆ ಸಂಬಂಧಿಸಿದಂತೆ ಕಾನೂನು ಮಾಪನಶಾಸ್ತ್ರ, ಇಲಾಖಾ ಅಧಿಕಾರಿಗಳು ಸತ್ಯಾಪನೆ ಮತ್ತು ಮುದ್ರೆ ಮಾಡಿ, ಸತ್ಯಾಪನಾ |

| | | |
|---|---|---|
| | ಗಮನದಲ್ಲಿದೆಯೇ; ಖಾಸಗೀಕರಣ ಮಾಡಿದರೆ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಉಂಟಾಗುವ ನಷ್ಟ ಎಷ್ಟು? | ಪ್ರಮಾಣ ಪತ್ರವನ್ನು ವಿತರಿಸುತ್ತಿದ್ದಾರೆ. ಸದರಿ ಕೆಲಸ-ಕಾರ್ಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ದಿನಾಂಕ: 26.10.2025 ರಂದು Government Approved Testing Centres (GATC) ಪರಿಷ್ಕೃತ ನಿಯಮಗಳು 2025 ಅಧಿಸೂಚನೆ ಹೊರಡಿಸಿದ್ದು, GATC ಒಂದು ಖಾಸಗಿ ಸಂಸ್ಥೆಯಾಗಿದ್ದು, ಸದರಿ ಅಧಿಸೂಚನೆಯಲ್ಲಿ 18 ವಿವಿಧ ತೂಕ ಮತ್ತು ಅಳತೆಗಳನ್ನು ಸೇರಿಸಲಾಗಿದೆ. ಅದರಲ್ಲಿ ತೂಕಗಳು. ಅಳತೆಗಳು, ಕೌಂಟರ್ ಸ್ಕೇಲ್, ಬೀಮ್ ಸ್ಕೇಲ್, ಎಲೆಕ್ಟ್ರಾನಿಕ್ ವೆಯಿಂಗ್ ಇನ್‌ಸ್ಟ್ರುಮೆಂಟ್ಸ್ 150 ಕೆ.ಜಿ ಸಾಮರ್ಥ್ಯವುಳ್ಳವರೆಗೆ ಹಾಗೂ ಕ್ಲಾಸ್-III ಮತ್ತು IV ಹಾಗೂ ಆಟೋಮೆಟಿಕ್ ರೈಲ್ ವೇಬ್ರಿಡ್ಜ್‌ಗಳು ಸಹ ಸೇರಿಕೊಂಡಿರುತ್ತದೆ.<br><br>GATC ರವರಿಗೆ ಸತ್ಯಾಪನೆ ಹಾಗೂ ಶುಲ್ಕ ಸಂಗ್ರಹಣೆ ಮಾಡುವ ಅಧಿಕಾರ ನೀಡಿರುವುದರಿಂದ ರಾಜ್ಯದ ಅಮಲ್ಜಾರಿ ಸಾಮರ್ಥ್ಯವು ದುರ್ಬಲವಾಗುತ್ತದೆ. ಇದರಿಂದಾಗಿ ಪೆಟ್ರೋಲಿಯಂ ಡೀಲರ್‌ಗಳಿಂದ ಅಂದಾಜು ಶೇಕಡಾ 45 ರಷ್ಟು ಹಾಗೂ ಇತರೆ ತೂಕ ಮತ್ತು ಅಳತೆ ಸಾಧನಗಳಿಂದ ಅಂದಾಜು ಶೇಕಡಾ 30 ರಷ್ಟು ನಷ್ಟ ಉಂಟಾಗುವ ಸಂಭವವಿರುತ್ತದೆ |

**ಸಂಖ್ಯೆ: ಇ-ಆನಾಸ 28 ಕಾಮಾಸೇ 2026 (2086425)**

(ಕೆ.ಹೆಚ್. ಮುನಿಯಪ್ಪ)

**ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 585 ರ ಅನುಬಂಧ

| ಕ್ರ. ಸಂ | ಅಧಿಕಾರಿ/ ನೌಕರರ ದರ್ಜೆ | ಹುದ್ದೆಯ ಪದನಾಮ | ಒಟ್ಟು ಮಂಜೂರಾದ ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ ಸಂಖ್ಯೆ | ಖಾಲಿಯಿರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | 2 | 3 | 4 | 5 | 06 |
| 1 | ಗ್ರೂಪ್-ಎ | ನಿಯಂತ್ರಕರು | 1 | 1 | - |
| | | ಜಂಟಿ ನಿಯಂತ್ರಕರು | 4 | 2 | 02 |
| | | ಉಪ ನಿಯಂತ್ರಕರು | 8 | 2 | 06 |
| | | ಸಹಾಯಕ ನಿಯಂತ್ರಕರು ಗ್ರೇಡ್-1 | 16 | 13 | 03 |
| 2 | ಗ್ರೂಪ್-ಬಿ | ಸಹಾಯಕ ನಿಯಂತ್ರಕರು ಗ್ರೇಡ್-2 | 34 | 26 | 08 |
| | | ಪತ್ರಾಂಕಿತ ವ್ಯವಸ್ಥಾಪಕರು | 01 | 01 | - |
| 3 | ಗ್ರೂಪ್-ಸಿ | ನಿರೀಕ್ಷಕರು | 107 | 45 | 62 |
| | | ಅಧೀಕ್ಷಕರು | 04 | 02 | 02 |
| | | ಶೀಘ್ರಲಿಪಿಗಾರರು | 05 | 01 | 04 |
| | | ಪ್ರಥಮ ದರ್ಜೆ ಸಹಾಯಕರು | 34 | 22 | 12 |
| | | ದ್ವಿತೀಯ ದರ್ಜೆ ಸಹಾಯಕರು | 45 | 09 | 36 |
| | | ಬೆರಳಚ್ಚುಗಾರರು | 10 | 06 | 04 |
| | | ಹಿರಿಯ ತಾಂತ್ರಿಕ ಸಹಾಯಕರು | 40 | 28 | 12 |
| | | ತಾಂತ್ರಿಕ ಸಹಾಯಕರು | 85 | 10 | 75 |
| | | ವಾಹನ ಚಾಲಕರು | 06 | 05 | 01 |
| 4 | ಗ್ರೂಪ್-ಡಿ | ಗ್ರೂಪ್-ಡಿ | 50 | 16 | 34 |
| **ಒಟ್ಟು** | | | **450** | **189** | **261** |